SRI H. C. SRIKANTAIAH (Minister for Municipal Administration).—

(*a*) Government are not aware of any such oral instructions.

(*b*) Yes.

(*c*) Action is being taken to rehabilitate them.

Building for office of the Dy. Director of Agriculture at Bijapur.

1315 SRI M. H. BAKINALKAR (Sindgi)—Will the Minister for Agriculture and Parliamentary Affairs be pleased to state:-

(*a*) whether it has come to the notice of the Government that the building where the office of the Deputy Director of Agriculture is situated at Bijapur is most un-suited as the same is on the third floor ?

(*b*) whether is there any place for construction of a building on the ground floor ?

SRI K. H. RANGANATH (Minister for Agriculture and Parliamentar Affairs)—

(*a*) Yes.

(*b*) The matter is under consideration.

(Assault on Sri G. K. Subbaiah M.L.A.)

(ಗೊಂದಲ)

ಶ್ರೀ ಜಿ. ಕೆ. ತಕ್ಕೇದ್. — ಅಧ್ಯಕ್ಷರೇ, ಇವೊತ್ತಿನ ದಿವಸ ನಮ್ಮ ಈ ಸದನಕ್ಕೆ ಮಾನ್ಯ ಸದಸ್ಯರು ಬರುವಾಗ ಅತ್ಯಂತ ಚಿಂತಾಜನಕ ಪರಿಸ್ಥಿತಿಯಿಂದ ಬಂದಿದ್ದಾರೆ. ನಮ್ಮ ವಯೋವೃದ್ಧ ಶಾಸಕರಾದಂತಹ ಶ್ರೀಮಾನ್ ಜಿ. ಕೆ. ಸುಬ್ಬಯ್ಯನವರನ್ನು ನೆನ್ನೆ ರಾತ್ರಿ ೧೦ ಗಂಟೆ ಸುಮಾರಿನಲ್ಲಿ ಅವರ ಜೀವವನ್ನು ತೆಗೆಯಲಿಕ್ಕೆ ಕೆಲವು ಗೂಂಡಾಗಳು ಪ್ರಯತ್ನ ಮಾಡಿದ್ದನ್ನು ನೋಡಿದರೆ, ಮಾನ್ಯ ಅಧ್ಯಕ್ಷರೇ, ನಾವು ಬೆಂಗಳೂರಿಗೆ ಬಂದು ವಿಧಾನ ಸಭೆಯ ಕಾರ್ಯ ಕಲಾಪಗಳನ್ನು ನಡೆಸುವುದಕ್ಕೆ ಅತ್ಯಂತ ವಿಷಾದ ನೀಯ ಮತ್ತು ಅತ್ಯಂತ ಭಯಭೀತಿ ವಾತಾವರಣ ನಿರ್ಮಾಣವಾಗಿದೆ. ಈಗ ಕೆಲವು ದಿವಸಗಳಿಂದ ನಮ್ಮ ರಾಜ್ಯದಲ್ಲಿ ನಡೆದಂತಹ ಅನೇಕ ರಾಜಕೀಯ ಸ್ಥಿತ್ಯಂತರಗಳಲ್ಲಿ ನಮ್ಮ ವಿಧಾನ ಸಭೆಯ ಸದಸ್ಯರುಗಳ ಮೇಲೆ ಶಾಸಕರ ಭವನದಲ್ಲಿರತಕ್ಕ ಶಾಸಕರ ಜೀವನದ ಮೇಲೆ ಇವೊತ್ತು ಗಂಡಾಂತರ ಬಂದೊದಗಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ವಿಚಾರವನ್ನು ಪ್ರಸ್ತಾಪ ಮಾಡಬೇಕು.

† ಶ್ರೀ ಜಿ. ಕೆ. ತಕ್ಕೇದ್.—ಅಧ್ಯಕ್ಷರೇ, ಇವೊತ್ತು ನಾವು ನಮ್ಮ ಊರಿನಲ್ಲಿ ನಮ್ಮ ಹೆಂಡತಿ ಮಕ್ಕಳನ್ನು ಬಿಟ್ಟು ಬಂದಿದ್ದೇವೆ. ಆದುದರಿಂದ ಮಾನ್ಯ ಅಧ್ಯಕ್ಷರು ಈವೊತ್ತು ನಮ್ಮ ಜೀವ ಎಷ್ಟು ಬೆಲೆಯುಳ್ಳದ್ದು ಎನ್ನುವುದನ್ನು ಪರಿಶೀಲನೆ ಮಾಡಬೇಕು. ಮಾನ್ಯ ಅಧ್ಯಕ್ಷರೆ, ಇವೊತ್ತು ವಿಧಾನ ಸಭೆಯ ಶಾಸಕರ ಭವನ ತಮ್ಮ ರಕ್ಷೆಯಲ್ಲಿ ಇದೆ. ಅಧ್ಯಕ್ಷರೆ, ಅವರನ್ನು ಹೊಡೆಯುವಾಗ ಅಲ್ಲಿ ರೂಮಿನ ಚಿಲಕ ತೆಗೆದು ನೋಡಿದಾಗ ರಕ್ತ ಒಂದೇ ಸಮನೇ ಹರಿಯುತ್ತಿತ್ತು. ಮಾನ್ಯ ಸುಬ್ಬಯ್ಯನವರ ಕಣ್ಣಲ್ಲಿ ನೀರು ಬರುತ್ತಿತ್ತು. ಕೈಯಲ್ಲಿ ಅಕ್ಕಿ ತೆಗೆದುಕೊಂಡು ಅನ್ನ ಮಾಡಬೇಕು ಅನ್ನುವಾಗ ಅಲ್ಲಿ ಹೊಡೆದಿರುವುದನ್ನು ನೋಡಿದರೆ ಆ ಅಕ್ಕಿಯೆಲ್ಲ ಅವರ ರೂಮಿನ ತುಂಬಾ ಚೆಲ್ಲಾಪಿಲ್ಲಿಯಾಗಿ ಹರಡಿತ್ತು. ಮಾನ್ಯ ಸದಸ್ಯರ ಮೇಲೆ ಕುಳಿತು ಅವರನ್ನು ಹೊಡೆದಿದ್ದಾರೆ, ಕಲ್ಲಿನಿಂದ ಜಜ್ಜಿದ್ದಾರೆ. ಇವೊತ್ತು